ಶೈಲಜಾ ಸುರೇಶ್

'ಮೇಡಂ... ಈಗಷ್ಟೇ ಕೋರ್ಟ್‌ನಿಂದ ಬಂದರು. ಫ್ರೆಶಪ್ ಆಗ್ತಿದಾರೆ. ಒಂದ್ ಫೈವ್ ಮಿನಿಟ್ಸ್ ಬಂದ್‌ಬಿಡ್ತಾರೆ. ಪ್ಲೀಸ್... ಕೂತ್ಕೊಳಿ... ಅಂದ್ಹಾಗೆ ನಿಮ್ಮ ಕೇಸ್‌ನ ಜಡ್ಜ್‌ಮೆಂಟ್ ಇನ್ನೊಂದೆರಡು ದಿನದಲ್ಲಿ ಬರುತ್ತಂತೆ. ನಿಮ್ಮ ಮಗಳು ನಿಮ್ಮನೆಗೆ ಬಂದ್ ಬಿಡ್ತಾಳೆ... ನಮಗೆಲ್ಲ ದೊಡ್ಡ ಪಾರ್ಟಿ ಉಂಟಲ್ವ...' ಜ್ಯೂನಿಯರ್ ಅಡ್ವೋಕೇಟ್ ಪುಷ್ಪಲತಾ ಮುಗುಳ್ನಗುತ್ತ ವನಿತಾಳಿಗೆ ಫ್ಲಾಸ್ಕ್‌ನಿಂದ ಕಾಫಿಯನ್ನು ಬಗ್ಗಿಸಿ ಕಾಫಿ ಕಪ್ಪು ನೀಡಿದಾಗ, ವನಿತಾ ಹಾಯೆಂದು ನಿಟ್ಟುಸಿರಿಟ್ಟು ಸೋಫಾ ಮೇಲೆ ಕುಳಿತು ಬಿಸಿ ಕಾಫಿಯನ್ನು ಗುಟುಕಿಸಿ ಮುಖ ಅರಳಿಸಿದಳು.

'ಥ್ಯಾಂಕ್ಸ್ ಫಾರ್ ಎ ಗುಡ್ ಕಾಫಿ... ಅಂಡ್ ಥ್ಯಾಂಕ್ಸ್ ಫಾರ್ ಎ ಹ್ಯಾಪಿ ನ್ಯೂಸ್ ಪುಷ್ಪಾ...'

'ವೆಲ್‌ಕಂ ಮ್ಯಾಡಂ...' ಪುಷ್ಪಲತಾ ಕಪಾಟಿನಿಂದ ಫೈಲು ಹುಡುಕಲು ಒಳಗೆ ಹೊರಟಾಗ, ವನಿತಾ ತನ್ನೊಳಗೆ ಖುಷಿಯಿಂದ ನಕ್ಕಳು. ತನ್ನ ಮಗಳು... ತನ್ನ ಬಳಿಗೆ ಬಂದುಬಿಡುತ್ತಾಳೆ. ತನ್ನ ದೊಡ್ಡ ಫ್ಲ್ಯಾಟ್‌ನ ತುಂಬಾ ಅವಳ ಗೆಜ್ಜೆಕಾಲಿನ ಸದ್ದು... ತನ್ನ ಮನೆ, ತನ್ನ ಮನಸು ತುಂಬಿದಂತಾಗುತ್ತದೆ. ತನ್ನ ಮಗಳನ್ನು ಕರೆದುಕೊಂಡು ವರ್ಲ್ಡ್ ಟೂರ್ ಮಾಡಬೇಕು. ಬೇಕಾದ ಹಾಗೆ ಶಾಪಿಂಗ್, ವಿಮಾನದಲ್ಲಿನ ಹಾರಾಟ, ತನ್ನ ಬದುಕಿಡೀ ಸುಂದರ ಸುಖ ಸ್ವಪ್ನವಾಗಿಬಿಡುತ್ತದೆ.

ಯೋಚಿಸುತ್ತಿದ್ದಂತೆ ಕಣ್ಮುಂದೆ ಮುದ್ದುಮಗಳು ತೇಲಿಬಂದಳು. ತಾನು ಅಮೆರಿಕಾಗೆ ಹೊರಟಾಗ ಪುಟಾಣಿ ಪ್ರಕೃತಿಗೆ ಎರಡು ವರ್ಷ. ತುಂಬು ನಿರಿಗೆಯ ಕೆನೆ ಬಣ್ಣದ ಫ್ರಾಕಿನಲ್ಲಿ, ಪುಟ್ಟ ಎರಡು ಜುಟ್ಟು ಕಟ್ಟಿಕೊಂಡು, ಸೇಬುಗೆನ್ನೆಯಲ್ಲಿ ನಗು ಮಿಂಚಿಸುತ್ತ, ಬಟ್ಟಲುಗಣ್ಣಿನಲ್ಲಿ ವಿಸ್ಮಯ ಚಿಮ್ಮಿಸುತ್ತ ನಿಂತಿದ್ದಳಲ್ಲವೇ...

'ಇದು ಕಡೇಸಲ ಕೇಳ್ತಿದೀನಿ ವನಿತಾ... ನಿನಗೆ ಗಂಡ, ಮಗು, ಸಂಸಾರ ಬೇಕೋ... ಇಲ್ಲಾ ನಿನ್ನ ಕೆರಿಯರ್ ಬೇಕೋ ನಿರ್ಧಾರ ಮಾಡು. ನೀನು ಅಮೆರಿಕಾಗೆ ಹೋಗ್ಲೇಬೇಕೂಂತಿದ್ರೆ ಮೊದ್ಲು ಡೈವೋರ್ಸ್ ಪೇಪರ್‌ಗೆ ಸೈನ್ ಮಾಡಿಬಿಟ್ಟು ಹೋಗು...'

ಪುರುಷೋತ್ತಮನ ಗಟ್ಟಿದನಿ ಈಗಷ್ಟೇ ಕಿವಿಯಲ್ಲಿ ಮೊಳಗಿದಂತಾಗಿ ಬೆಚ್ಚಿ ಕುಳಿತಳು.

ತನಗಾಗ ಗಂಡ, ಮಗು, ಸಂಸಾರಕ್ಕಿಂತ ಅಮೆರಿಕಾ ಯಾತ್ರೆ, ಏರುವ ಸಂಬಳ, ಐಷಾರಾಮಿ ಬದುಕಿನ ಆಕರ್ಷಣೆಯೇ ಹೆಚ್ಚಾಗಿತ್ತಲ್ಲವೇ... ಡೈವೋರ್ಸ್ ಪೇಪರ್‌ಗೆ ಸಹಿ ಮಾಡುವ ಮುನ್ನ ಮೆಚ್ಚಿ ಮದುವೆಯಾದ ಪುರುಷೋತ್ತಮನಾಗಲೀ... ಮುದ್ದು ಮುದ್ದಾದ ಮಗುವಾಗಲೀ ಅಡ್ಡಿಯಾಗಲೇ ಇಲ್ಲವಲ್ಲ.

ಜೀನ್ಸ್ ಪ್ಯಾಂಟ್‌ನಲ್ಲಿ, ಕೂಲಿಂಗ್ ಗ್ಲಾಸ್ ಧರಿಸಿ, ಭುಜದವರೆಗೆ ಕತ್ತರಿಸಿದ್ದ ಕೂದಲು ಹಾರಿಸಿಕೊಂಡು ವಿಮಾನ ಹತ್ತುವಾಗ, ತನ್ನನ್ನು ಕಳಿಸಲು ಬಂದಿದ್ದ ಅಪ್ಪಅಮ್ಮ, ತಮ್ಮತಂಗಿ ಎಲ್ಲರೂ ಮಂಕಾಗಿದ್ದರೂ ತನಗೇನೂ ಅನಿಸಿರಲೇ ಇಲ್ಲ.

ಎರಡು ವರ್ಷಕ್ಕೆಂದು ಹೋದವಳು 10 ವರ್ಷ ಅಲ್ಲಿಯೇ ಉಳಿದುಬಿಟ್ಟೆ. ತನ್ನ ಕಂಪೆನಿಯ ಪಾಲುದಾರನಾಗಿದ್ದ ವಿಕ್ರಂ ಸೇನ್‌ನನ್ನು ಮದುವೆಯಾಗಿದ್ದೂ ಆಗಿತ್ತು. ಇಂಡಿಯಾದಲ್ಲಿ ತನ್ನ ಕಂಪೆನಿಯ ಶಾಖೆ ಆರಂಭವಾದಾಗಷ್ಟೇ ಇಲ್ಲಿಗೆ ಮರಳಿದ್ದು.

12 ವರ್ಷಗಳ ನಂತರದ ಜೀವನ ಅದೆಷ್ಟು ಬದಲಾಗಿಬಿಟ್ಟಿತ್ತು.

ತಮ್ಮತಂಗಿಯರ ಮದುವೆಯಾಗಿತ್ತು. ಅವರವರ ಸಂಸಾರದಲ್ಲಿ ಅವರು ಮುಳುಗಿಹೋಗಿದ್ದರು. ಅಪ್ಪಅಮ್ಮ ತನ್ನದೇ ಕೊರಗಿನಲ್ಲಿ ತೀರಿಕೊಂಡರೆಂದು ಅವರು